ಲಿಮಿಟೆಡ್ ಯಾದವಗಿರಿ, ಮೈಸೂರು.			
2) ಮೆ:ಕೂರ್ಗ್ ಅಂಡ್ ಮೈಸೂರ್ ಕಾಫಿ ಕಂಪನಿ (1937) ಲಿಮಿಟೆಡ್ ಚಾಮುಂಡಿ.ಕ್ಯೂರಿಂಗ್ ವರ್ಕ್ಸ್ ಕೆ.ಆರ್.ರಸ್ತೆ, ಮೈಸೂರು.	50	155	ನಷ್ಟ. (ರೂ.470000–00)
3. ಮೇ:ಬಿ.ಎನ್. ಸುಬ್ಬಯ್ಯ ಅಂಡ್ ಸನ್ಸ್, ಕಾಫಿ ಕ್ಯೂರಿಂಗ್ ವರ್ಕ್ಸ್ ಹಳೇ ಹೆಗ್ಗಡದೇವನಕೋಟೆ ರಸ್ತೆ, ಮೈಸೂರು ದಕ್ಷಿಣ.	7	35	ನಷ್ಟ (ರೂ. 2,97,526–78)

ಬೆಂಗಳೂರು ನಗರಕ್ಕೆ ಈವರೆಗೆ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿರುವ ಹಣದ ಬಗ್ಗೆ

55: ಶ್ರೀ ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಂಗಳೂರು ನಗರ ನೀರಿನ ವಿವಿಧ ಹಂತಗಳಿಗೆ ಯಾವ ಯಾವ ಯೋಜನೆಗಳಲ್ಲಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

2. ಮೈಸೂರು ನಗರದ ಕುಡಿಯುವ ನೀರು ಸರಬರಾಜು ಯೋಜನೆಗೆ ಈವರೆವಿಗೂ ಬಿಡುಗಡೆ ಮಾಡಿರುವ ಹಣವೆಷ್ಟು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1.		ರೂ.ಕೋಟಿಗಳಲ್ಲಿ	
1.	ಕಾವೇರಿ ಮೊದಲನೆ ಹಂತ (1970–74)	ಕರ್ನಾಟಕ ಸರ್ಕಾರ	18.84
		ಡಿಬೆಂಚರ್ಸ್	10.45
		ಜೀವ ವಿಮಾ ಇಲಾಖೆ	7.00
		ರಕ್ಷಣಾ ಇಲಾಖೆ	2.00
		ಒಟ್ಟು ಮೊತ್ತ	38.29
2.	ಕಾವೇರಿ ಎರಡನೇ ಹಂತ (1980–84)	ಕರ್ನಾಟಕ ಸರ್ಕಾರ	19.95
		ಡಿಬೆಂಚರ್ಸ್	12.93
		ಜೀವವಿಮಾ ಇಲಾಖೆ	19.75
		ರಕ್ಷಣಾ ಇಲಾಖೆ	3.44

	ಸರ್ಕಾರಕ್ಕೆ ಕೊಡಬೇಕಾಗಿದ್ದ ಕಂತಿನ ಹಣ ಹಾಗೂ ಬಡ್ಡಿಯನ್ನು		
		ಯೋಜನೆಗೆ ಬಳಸಿದ್ದು	10.47
		ಒಟ್ಟು ಮೊತ್ತ	66.54
3.	ಕಾವೇರಿ ಮೂರನೇ ಹಂತ (1986–93)	ಕರ್ನಾಟಕ ಸರ್ಕಾರ	54.90
		ಜೀವವಿಮಾ ಇಲಾಖೆ	49.50
		ಡಿಬೆಂಚರ್ಸ್	22.82
		ರಕ್ಷಣಾ ಇಲಾಖೆ	13.00
		ಹುಡ್ಕೊ	28.50
		ಬಿ.ಡಿ.ಎ.	21.30
		ಬಿ.ಸಿ.ಸಿ.	25.50
		ರೇಲ್ವೇಸ್	4.00
		ಒಟ್ಟು ಮೊತ್ತ	219.52

2. ರೂ. 184.67.

ರಾಜ್ಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಭಾರತೀಯರನ್ನು ಕುರಿತು

56: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಭಾರತೀಯರುಗಳು ಯಾರು;

ಆ. ಅವರುಗಳು ಪ್ರಾರಂಭಿಸುವ ಉದ್ದಿಮೆಗಳಾವುವು ಹಾಗೂ ಅವರುಗಳು ಹೂಡಿರುವ ಒಟ್ಟು ಬಂಡವಾಳವೆಷ್ಟು;

ಇ. ಅವರುಗಳಿಗೆ ಸರ್ಕಾರ ಯಾರ್ಯಾರಿಗೆ ಯಾವ ರೀತಿಯ ಸವಲತ್ತುಗಳನ್ನು ನೀಡಿದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ರಾಜ್ಯದಲ್ಲಿ ಬಂಡವಾಳ ಹೂಡಿರುವ ವಿದೇಶಿ ಭಾರತೀಯರುಗಳ ಮಾಹಿತಿಯು, ಅಡಕ–'ಅ' ದಲ್ಲಿ ನೀಡಲಾಗಿದೆ.

ಆ. ಅಡಕ–'ಅ' ನಲ್ಲಿ ಸದರಿ ಘಟಕಗಳ ಹೆಸರುಗಳನ್ನು ಮತ್ತು ಅವರು ಹೂಡಿರುವ ಬಂಡವಾಳದ ಮಾಹಿತಿಯನ್ನು ಒದಗಿಸಲಾಗಿದೆ.

ಇ. ವಿದೇಶಿ ಭಾರತೀಯರಿಗಾಗಿ ರಾಜ್ಯ ಸರ್ಕಾರವು ಯಾವ ವಿಶೇಷವಾದ ಸವಲತ್ತುಗಳನ್ನೂ ನೀಡಿರುವುದಿಲ್ಲ. ವಿದೇಶಿ ಭಾರತೀಯರಿಗಾಗಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ನಾಡಲ್ ಏಜೆನ್ಸಿಯು ಇವರುಗಳಿಗಾಗಿ ಸೇವಾ ಸೌಲಭ್ಯಗಳನ್ನು ಒದಗಿಸುತ್ತಿದೆ. ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಒದಗಿಸಬೇಕಾದ ಮಾಹಿತಿಯನ್ನು ಸಲ್ಲಿಸಲು ವಿದೇಶಿ ಭಾರತೀಯರಿಗೆ ಸಹಾಯ ನೀಡಲಾಗುತ್ತಿದೆ.